(2)

ಕರ್ನಾಟಕ ಸರ್ಕಾರ

(ಕಂದಾಯ ಇಲಾಖೆ)

ಆಯುಕ್ತರವರ ಕಾರ್ಯಾಲಯ, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ, ಭೂಸ್ವಾಧೀನ, ಕೃಮೇ.ಯೋ.,
ನವನಗರ, ಬಾಗಲಕೋಟೆ-587 103

Ph: 08354-235462 Fax: 08354-235459 e-mail: commrbgk@gmail.com

ನಂ:ಕಂಇ:ಭೂಸ್ವಾ-5(2):ಸಿಆರ್-63:2016-17 897 ದಿನಾಂಕ:26-08-2021.

ಇವರಿಗೆ,
ವಿಶೇಷ ಭೂಸ್ವಾಧೀನಾಧಿಕಾರಿಗಳು,
ಹಿಪ್ಪರಗಿ ಆಣೆಕಟ್ಟು ಯೋಜನೆ,
ಅಥಣಿ. ಬೆಳಗಾವಿ ಜಿಲ್ಲೆ

ಮಾನ್ಯರೆ,

ವಿಷಯ:- ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ನ್ಯಾಯೋಚಿತ ಪರಿಹಾರ ಹಕ್ಕು ಪುನರವಸತಿ ಮತ್ತು ಪುನರ್‌ನಿರ್ಮಾಣ ಅಧಿನಿಯಮ 2013 ರ ಕಲಂ 25ರಡಿ ಅವಧಿ ವಿಸ್ತರಿಸುವ ಕುರಿತು.

ಉಲ್ಲೇಖ:- 1) ತಮ್ಮ ಕಛೇರಿ ಪತ್ರ ಸಂ:ಎಲ್‌ಎಕ್ಯೂ/ಜೆಎಸ್‌ಆರ್-13/13-14. ದಿ:10-08-2021.(ಈ ಕಛೇರಿ ಸ್ವೀಕೃತಿ ದಿನಾಂಕ:12-08-2021)
2) ಈ ಕಛೇರಿ ಪತ್ರ ಸಂಖ್ಯೆ: ಕಂಇ:ಭೂಸ್ವಾ-5(2):ಸಿಆರ್-63:2016-17/1399 ದಿನಾಂಕ:12-03-2021.

-0000000-

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರ ಪತ್ರದನ್ವಯ ಅಥಣಿ ತಾಲೂಕಿನ ಖವಟಕೊಪ್ಪ ಗ್ರಾಮದ ಭಾಗ-5ರ ಪ್ರಕರಣದಲ್ಲಿ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ನ್ಯಾಯೋಚಿತ ಪರಿಹಾರ ಹಕ್ಕು ಪುನರವಸತಿ ಮತ್ತು ಪುನರ್‌ನಿರ್ಮಾಣ ಅಧಿನಿಯಮ 2013 ರ ಕಲಂ 19 ರಡಿ ಅಂತಿಮ ಅಧಿಸೂಚನೆಯ ದಿನಾಂಕ:05-03-2020 ರಂದು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಗೊಂಡಿರುತ್ತದೆ. ಕೋವಿಡ್-19 ಲಾಕಡೌನ ಪ್ರಯುಕ್ತ, ಸ್ಥಳ ತನಿಖೆ ಮಾಡಿದ್ದು ಕರಡು ಐತೀರ್ಪಿನ ಗಣಕೀಕರಣ ಕಾರ್ಯವು ಪ್ರಗತಿಯಲ್ಲಿರುತ್ತದೆ. ಕಾರಣ ಐತೀರ್ಪು ರಚನೆ ಮಾಡಲು ಆಗದ ಕಾರಣ ಕಲಂ 25ರಡಿ ಅವಧಿ ವಿಸ್ತರಿಸಲು ಕೋರಿರುತ್ತೀರಿ.

ಮೇಲಿನ ಪ್ರಕರಣದಲ್ಲಿ ಅಥಣಿ ತಾಲೂಕಿನ ಖವಟಕೊಪ್ಪ ಗ್ರಾಮದ ಭಾಗ-5ರ ಎಲ್.ಎ.ಕ್ಯೂ:ಜೆ.ಎಸ್.ಆರ್.-13:2013-14ರ ಪ್ರಕರಣದಲ್ಲಿ ಈಗಾಗಲೇ ಉಲ್ಲೇಖ (2) ರನ್ವಯ ದಿನಾಂಕ: 04-09-2021 ರವರೆಗೆ ಕಲಂ 25ರಡಿ ಕಾಲಾವಕಾಶ ವಿಸ್ತರಿಸಿ ಅನುಮತಿ ನೀಡಲಾಗಿರುತ್ತದೆ. ಪುನ: ತಮ್ಮ ಕೋರಿಕೆಯನ್ನು ಪರಿಗಣಿಸಿ, ಕಲಂ 25ರಡಿ ದಿನಾಂಕ:05-09-2021 ರಿಂದಾ ದಿನಾಂಕ:04-03-2022 ರ ವರೆಗೆ ಕಾಲಾವಕಾಶ ವಿಸ್ತರಿಸಿ ಅನುಮತಿ ನೀಡಿದೆ. ಕಾಲಾವಕಾಶ ನೀಡಿರುವ ಬಗ್ಗೆ ಅಂತರ್ಜಾಲದಲ್ಲಿ ಅಪ್‌ಲೋಡ ಮಾಡಲು ಈ ಮೂಲಕ ತಿಳಿಸಿದೆ.

"ಕ.ಟಿ.ಮಾನ್ಯ ಆಯುಕ್ತರವರಿಂದ ಅನುಮೋದಿಸಲ್ಪಟ್ಟಿದೆ"

ಆಯುಕ್ತರು,
ಪುಪು/ಭೂಸ್ವಾಧೀನ, ಕೃಮೇ.ಯೋ.,
ನವನಗರ, ಬಾಗಲಕೋಟೆ.
ಇವರ ಪರವಾಗಿ.

ಪ್ರತಿಯನ್ನು:1) ಕಂಪ್ಯೂಟರ್ ಪ್ರೋಗ್ರಾಮರ್, ಮ.ವ್ಯ. ರವರ ಕಛೇರಿ, ಕೃಮೇ.ಯೋ. ನವನಗರ ಬಾಗಲಕೋಟೆ ಇವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
2) ಕಛೇರಿ ಕಡತಕ್ಕೆ.

ATHANIA@SAVANUR.25/20-21-2

31-8-21